**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 235/2023**

**ಸಾಕ್ಷಿಯನ್ನು ದಿಃ 24-02-2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿ ಪರ ಶ್ರೀ. SN ವಕೀಲರಿಂದಃ**

ನಾನು ಕೂಲಿ ಕೆಲಸ ಮಾಡುತ್ತಿದ್ದೆ. ಹುಷಾರಿಲ್ಲದೇ ಇರುವ ಕಾರಣ ಕೆಲಸಕ್ಕೆ ಹೋಗುತ್ತಿಲ್ಲ. ನನಗೆ ಈ ಹಿಂದೆ ಸಾಕ್ಷಿ ನುಡಿದಿರುವ ಬಗ್ಗೆ ನೆನಪಿದೆ. ದಿಃ 31.01.2023 ರಂದು ಘಟನೆ ನಡೆದಿದೆ. ಘಟನೆ ನಡೆದಾಗ ರಾತ್ರಿ 10.00 ಗೂ ಮೇಲಾಗಿತ್ತು. ರಾತ್ರಿ 10.00 ಗಂಟೆಯ ಸಮಯದಲ್ಲಿ ಜನರ ಓಡಾಟ ಕಡಿಮೆ ಇದ್ದು ನಿಶಬ್ದವಾಗಿರುತ್ತದೆ ಎಂದರೆ ಸರಿ. ಚಾಸಾ-3 ರವರು ಮನೆಯಿಂದ ಹೊರಗೆ ಹೋದ 20 ನಿಮಿಷದಲ್ಲಿ ಚಿರಾಡುವ ಶಬ್ದ ಕೇಳಿತು. ಚಾಸಾ-3 ರವರು ಅಮ್ಮ-ಅಪ್ಪ ಎಂದು ಕೂಗುವ ಶಬ್ದ ಕೇಳಿತು. ತಕ್ಷಣ ನಾನು ಮತ್ತು ಚಾಸಾ-2 ರವರು ಮನೆಯಿಂದ ಹೊರಗೆ ಹೋದೆವು. ಆಗ ಚಾಸಾ-3 ರವರು ನಮ್ಮ ಮನೆಯ ಗೇಟ್ ಹತ್ತಿರ ನಿಂತಿದ್ದರು. ಆರೋಪಿ ಚಾಸಾ-3 ರವರ ಪಕ್ಕದಲ್ಲಿಯೇ ನಿಂತಿದ್ದರು. ನಮ್ಮ ಮನೆಯ ಮುಂದೆ ಚರಂಡಿ ಇದೆ. ಸಾಕ್ಷಿ ಮುಂದುವರಿದು ಕಾಂಪೌಂಡ್ ಇದೆ ಎಂದು ನುಡಿಯುತ್ತಾರೆ. ಮನೆಯ ಮುಂದೆ ವಿದ್ಯುತ್ ಕಂಬದ ದೀಪದ ಬೆಳಕು ಇದೆ. ನಾನುಮತ್ತು ಚಾಸಾ-2ರವರು ಆರೋಪಿಯ ಬಳಿ ಯಾಕೆ ಈಗೆ ಮಾಡುತ್ತಿದ್ದಿಯಾ ಎಂದು ಕೇಳಿದೆವು. ಆರೋಪಿ ಚಾಸಾ-3 ರವರಿಗೆ ವಾಹನವನ್ನು ಗುದ್ದಿಸುವ ರೀತಿಯಲ್ಲಿ ಬಂದಿರಲಿಲ್ಲ, ನಿಧಾನವಾಗಿಯೇ ಬರುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-3 ರವರು ರಸ್ತೆಯ ಮಧ್ಯದಲ್ಲಿ ನಿಂತಿದ್ದು ಆಗ ಅಲ್ಲಿ ಬರುತ್ತಿದ್ದ ಆರೋಪಿಯು ಬದಿಗೆ ಹೋಗುವಂತೆ ಹೇಳಿದರು ಎಂದರೆ ಸರಿಯಲ್ಲ. ಆರೋಪಿ ನನಗೆ ಏನೇ ಲೋಫರ್ ಸೂಳೆ ಎಂದು ಅವಾಚ್ಯವಾಗಿ ಬೈದ. ಆರೋಪಿ ಕೆಟ್ಟ ಶಬ್ದಗಳಿಂದ ನನಗೆ ಬೈದಿಲ್ಲ ಎಂದರೆ ಸರಿಯಲ್ಲ.

ಆ ದಿನ ನಾನು ಕೆಂಪುಬಣ್ಣದಿಂದ ಕೂಡಿದ ನೈಟಿ ಧರಿಸಿದ್ದೆ. ಆರೋಪಿ ನನ್ನ ಬಟ್ಟೆಯ ಮುಂಭಾಗ ಹರಿದ. ಆರೋಪಿ ಬಟ್ಟೆ ಹರಿದ ಎನ್ನುವ ಸಮಯದಲ್ಲಿ ನಿಮಗೆ ಏಟಾಯಿತೆ ಎಂದರೆ ಇಲ್ಲ. ನಾನು ಹೇಳಿದಂತಹ ರೀತಿಯಲ್ಲಿ ಗಲಾಟೆಯಾಗಿ ಬಟ್ಟೆ ಹರಿದಿದ್ದಲ್ಲಿ ನನಗೆ ಗಾಯಗಳಾಗುತ್ತಿದ್ದವು ಎಂದರೆ ಸರಿಯಲ್ಲ.

ಆರೋಪಿ ಮು.ಮಾ–3 ಅನ್ನು ತನ್ನ ಶರ್ಟ್‌ನ ಜೇಬಿನಿಂದ ತೆಗೆದರು. ಸದರಿ ಪೆನ್ನಿನ ಬಣ್ಣ ಈಗ ಹೇಳಲಾಗುವುದಿಲ್ಲ. ಮು.ಮಾ–1 ಕೆಂಪುಬಣ್ಣದ ನೈಟಿ ಅಲ್ಲ ಎಂದರೆ ನಾನು ಅದೇ ನೈಟಿಯನ್ನು ಧರಿಸಿದ್ದೆ. ಮು.ಮಾ–3ರಿಂದ ನಿಮಗೆ ಹಲ್ಲೆ ಮಾಡಿದ್ದಾರೆಯೇ ಎಂದರೆ ನನಗೆ ಮರೆತುಹೋಗಿದೆ ಈಗ ಸರಿಯಾಗಿ ಹೇಳಲಾಗುವುದಿಲ್ಲ. ಮು.ಮಾ–3 ಬರೆಯುವ ಪೆನ್ನಾಗಿದ್ದು ಅದರಿಂದ ಗಾಯ ಉಂಟುಮಾಡಲಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಅದೇ ದಿನ ರಾತ್ರಿ ಆಸ್ಪತ್ರೆಗೆ ಹೋಗಿದ್ದೇನೆ. ಚಿಕಿತ್ಸೆ ಪಡೆದು ರಾತ್ರಿ ವಾಪಸ್ಸು ಮನೆಗೆ ಬಂದೆ. ಮರುದಿನ ಪುನಃ ಆಸ್ಪತ್ರೆಗೆ ಹೋದೆ. ದಿಃ 31.01.2023 ರಂದು ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಯನ್ನು ಪೋಲಿಸರು ಹಾಜರುಪಡಿಸಿರಬಹುದು. ನಾನು ಆದಿನ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಅದೇ ದಿನ ದೂರು ಕೊಟ್ಟಿದ್ದೇನೆ. ವೆನ್ನಿ ಥಾಮಸ್ ನನ್ನ ಅಕ್ಕನ ಮಗ. ಚಾಸಾ–5 ನನ್ನ ಮೈದನ ಮಗ. ರಸ್ತೆಯ ಮಧ್ಯದಲ್ಲಿ ನಿಂತಿದ್ದ ಚಾಸಾ–3 ರವರನ್ನು ರಸ್ತೆಯ ಬದಿಗೆ ಹೋಗು ಎಂದು ಆರೋಪಿ ಹೇಳಿದ್ದರಿಂದ ನಾನು, ಚಾಸಾ–2 ರಿಂದ 4 ಮತ್ತು ವೆನ್ನಿ ಥಾಮಸ್ ರವರು ಸೇರಿ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾವು ಆರೋಪಿಯ ವಿರುದ್ಧ ಗಲಾಟೆ ಮಾಡಿದ್ದರಿಂದ ಆರೋಪಿ ಪೋಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಅದೇ ದಿನ ಬಟ್ಟೆಯನ್ನು ಮನೆಯವರು ಪೋಲಿಸರಿಗೆ ಕೊಟ್ಟಿದ್ದಾರೆ. ಮು.ಮಾ–1 ಮತ್ತು 2ನ್ನು ನಾವೇ ಹರಿದುಹಾಕಿ ಆರೋಪಿಗೆ ತೊಂದರೆ ಕೊಡಲೆಂದು ಪೋಲಿಸರಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ವೆನ್ನಿಥಾಮಸ್ ಮತ್ತು ನಾವೆಲ್ಲರೂ ಸೇರಿಕೊಂಡು ನನ್ನ ಮೂಲಕ ಸುಳ್ಳು ದೂರನ್ನು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಗಲಾಟೆ ಮಾಡಿ ನನಗೆ ಗಾಯ ಮಾಡಿದ್ದಲ್ಲಿ ಅದೇ ದಿನ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೆ, ಗಲಾಟೆ ಮಾಡದೇ ಇರುವ ಕಾರಣ ಅದೇ ದಿನ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಸೇರಿಕೊಂಡು ಸಂಚು ಮಾಡಿ ದಿಃ 01.02.2023 ರಂದು ಆಸ್ಪತ್ರೆಗೆ ದಾಖಲಾಗಿದ್ದೇನೆ ಎಂದರೆ ಸರಿಯಲ್ಲ. ವೆನ್ನಿ ಥಾಮಸ್ ರವರು ನನಗೆ ಗೀಚಿ ಗಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ–3ರಂತಹ ಪೆನ್ನನ್ನು ಚಾಸಾ–3

ರವರು ಬರೆಯಲು ಉಪಯೋಗಿಸುತ್ತಾರೆ . ಮು.ಮಾ–3ರ ಪೆನ್ನನ್ನು ಪೋಲಿಸರಿಗೆ ನಾವೇ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಾನು 8 ದಿನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಆ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ಕೊಟ್ಟಿದ್ದಿರಾ ಎಂದರೆ ಹೇಳಿದ್ದೇನೆ. ನಾನು ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕು ಎಂದು ರಾಬರ್ಟ್‌ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.